42

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ**

ಪ್ರಶ್ನೆ: ಕಳೆದ ಆರು ವರ್ಷಗಳ ಅಧಿಕೃತ ದತ್ತಾಂಶಗಳನ್ನು ವಿಶ್ಲೇಷಿಸಿದರೆ ಕರ್ನಾಟಕದಲ್ಲಿ ನರೇಗಾ ಹಗರಣಗಳ ಬೃಹತ್ ಜಾಲ ತೆರೆದುಕೊಳ್ಳುತ್ತದೆ. 2019 ರಿಂದ 2025 ರ ಅವಧಿಯಲ್ಲಿ ರಾಜ್ಯದಲ್ಲಿ ಅಂದಾಜು 669.92 ಕೋಟಿ ಮೊತ್ತದ ಅಕ್ರಮ ನಡೆದಿರುವುದು ಗೋಚರಿಸುತ್ತದೆ. ಕೇಂದ್ರ ಸರ್ಕಾರದ ನರೇಗಾ ಪೋರ್ಟಲ್ ನಲ್ಲಿರುವ ದತ್ತಾಂಶ, ಸಾಮಾಜಿಕ ಪರಿಶೋಧನಾ ವರದಿ ವಿಶ್ಲೇಷಿಸಿ ನೋಡಿದಾಗ ಈ ಅಂಶ ಕಂಡುಬರುತ್ತದೆ. ಈ ಮೊತ್ತವು ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾದದ್ದು ಮಾತ್ರ ಇನ್ನೂ ಪತ್ತೆಯಾಗದ ಅಥವಾ ಮುಚ್ಚಿಹೋಗಿರುವ ಹಗರಣಗಳ ಲೆಕ್ಕಾಚಾರ ಹಾಕಿದರೆ ಅಕ್ರಮದ ಮೊತ್ತ ಇನ್ನೂ ದೊಡ್ಡದಾಗುವ ಸಾಧ್ಯತೆಯಿದೆ.

ನರೇಗಾ ನಿಯಮದಂತೆ ಮಾನವ ಶ್ರಮದ ಕೆಲಸ ನಡೆಯಬೇಕು. ಆದರೆ, ರಾತ್ರೋರಾತ್ರಿ ಜೆಸಿಬಿ ಮೂಲಕ ಕೆಲಸ ಮುಗಿಸಿ ನೂರಾರು ಕಾರ್ಮಿಕರು ಕೆಲಸ ಮಾಡಿದ್ದಾಗಿ ಸುಳ್ಳು ಮಸ್ಟರ್ ರೋಲ್ ಸೃಷ್ಟಿಸಲಾಗಿರುವ ಪ್ರಕರಣ ಹೆಚ್ಚಿದೆ. ಸಾಮಗ್ರಿ ಪೂರೈಕೆ ಮಾಡದಿದ್ದರೂ ಅಸ್ತಿತ್ವದಲ್ಲೇ ಇಲ್ಲದ ವೆಂಡರ್ ಕಂಪನಿಗಳಿಂದ ನಕಲಿ ಜಿಎಸ್‌ಟಿ ಬಿಲ್ ಪಡೆದು ಸಾಮಗ್ರಿ ವೆಚ್ಚದ ಹೆಸರಿನಲ್ಲಿ ಹಣ ಲೂಟಿ ಮಾಡಿದ್ದಿದೆ. ಮೃತಪಟ್ಟವರು ಮತ್ತು ಊರಲ್ಲೇ ಇಲ್ಲದವರ ಹೆಸರಿನಲ್ಲಿ ಹಾಜರಾತಿ ದಾಖಲಿಸಿ ಅರ್ಹರಲ್ಲದವರಿಗೆ ಹಣ ವರ್ಗಾಯಿಸಿ ಪಡೆಯುವುದು ಸಾಮಾನ್ಯ ವಿಚಾರವಾಗಿದೆ. ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಸೆಳೆಯಲು ಬಯಸುತ್ತೇನೆ.

*******

**ಉತ್ತರ:** ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯವು 2013-14 ನೇ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, ಸಾಮಾಜಿಕ ಲೆಕ್ಕಪರಿಶೋಧನೆಯನ್ನು ದೇಶದಲ್ಲಿ ಜಾರಿಗೊಳಿಸಿದ ಮೊದಲ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಸಾಮಾಜಿಕ ಪರಿಶೋಧನಾ ವರದಿಯಲ್ಲಿ ಹಣಕಾಸಿನ ದುರುಪಯೋಗ ಮಾತ್ರವಲ್ಲದೆ ಇತರ ವಿಷಯಗಳಾದ ಆಕ್ಷೇಪಣೆ, ಕುಂದುಕೊರತೆ ಮತ್ತು ಹಣಕಾಸಿನ ವಿಚಲನೆಯಂತಹ ವಿಷಯಗಳನ್ನು ಒಳಗೊಂಡಿದೆ. 2019-2020 ರಿಂದ 2024-25ನೇ ಸಾಲಿನವರೆಗೆ ಸಾಮಾಜಿಕ ಪರಿಶೋಧನಾ ವರದಿಯಲ್ಲಿ 104079 ಪ್ಯಾರ/ಪ್ರಕರಣಗಳಲ್ಲಿ ವಸೂಲಾತಿಗೆ ಸೂಚಿಸಿದ ಮೊತ್ತ ರೂ.238.25 ಕೋಟಿ ಗಳಾಗಿದ್ದು, ಈ ಪ್ರಕರಣದಲ್ಲಿ ಅಡ್‌ಹಾಕ್ ಸಮಿತಿಯು 83682 ಪ್ರಕರಣಗಳನ್ನು ಇತ್ಯರ್ಥ ಪಡಿಸಿ 35112 ಪ್ರಕರಣಗಳಿಗೆ ಮಾತ್ರ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.33.63ಕೋಟಿಗಳು, ವಸೂಲಾತಿಗೆ ಸೂಚಿಸಿರುವ ಮೊತ್ತದಲ್ಲಿ ಈಗಾಗಲೇ ರೂ.32.03ಕೋಟಿಗಳನ್ನು ವಸೂಲಾತಿ ಮಾಡಲಾಗಿದೆ. ವಸೂಲಾತಿಯು ಶೇ.95.24 ಇರುತ್ತದೆ.

**ವಸೂಲಾತಿಗೆ ಸೂಚಿಸಿರುವ ವರ್ಷವಾರು ಮಾಹಿತಿ (Rs in Crores)**

| SL No | Year | Total No of Paras | Social Audit Reported Amount | Total No of decided Cases | Cases with financial Misappropriation (Adhoc) Committee) | Final Recoverable amount (Adhoc Committee) | Amount Recovered | % of Recovery |
|---|---|---|---|---|---|---|---|---|
| 1 | 2019-20 | 14707 | 60.56 | 13513 | 5249 | 7.86 | 7.72 | 98.22 |
| 2 | 2020-21 | 7913 | 32.82 | 7249 | 2528 | 3.92 | 3.85 | 98.21 |
| 3 | 2021-22 | 16744 | 23.27 | 15529 | 5857 | 4.81 | 4.71 | 97.92 |
| 4 | 2022-23 | 12313 | 17.52 | 11195 | 4410 | 3.15 | 3.13 | 99.37 |
| 5 | 2023-24 | 27660 | 53.85 | 20240 | 9122 | 9.08 | 7.86 | 86.56 |
| 6 | 2024-25 | 24742 | 50.23 | 15956 | 7946 | 4.81 | 4.76 | 98.96 |
| **Total** | | **104079** | **238.25** | **83682** | **35112** | **33.63** | **32.03** | **95.24** |

ಸಂಖ್ಯೆ: ಗ್ರಾಅಪ/40(/ಉಖಾಯೋ/2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.